ಆ) ಸರ್ಕಾರವು ಈ ಕೆಳಕಂಡ ಕಾರ್ಯಕ್ರಮಗಳಿಗೆ ಸಹಾಯ ಧನವನ್ನು ನೀಡುತ್ತಿದೆ:

(ರೂ. ಕೋಟಿಗಳಲ್ಲಿ)

	2001–02 ಲೆಕ್ಕ	2002–03 ಲೆಕ್ಕ	2003–04 ಪರಿಷ್ಕೃತ ಅಂದಾಜು	2004–05 ಆಯವ್ಯಯ ಅಂದಾಜು
ಆಹಾರ	206	176	201	300
ಸಾರಿಗೆ	145	64	53	54
ವಸತಿ	155	12	58	40
ಕೈಗಾರಿಕೆ	155	140	80	13
ವಿದ್ಯುಚ್ಛಕ್ತಿ	2302	1842	1765	1400
ಇತರೆ	30	25	232	261

ಇ) ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಸರ್ಕಾರವು ಪಾವತಿಸುತ್ತಿರುವ ಸಹಾಯಧನದ ಪ್ರಮಾಣವು ಕ್ರಮೇಣ ಇಳುವರಿ ಆಗಿರುವುದನ್ನು ಕಾಣಬಹುದು. ಎಲ್ಲಾ ವಲಯಗಳಲ್ಲೂ ಸಹಾಯ ಧನದ ಸೂಕ್ತ ನಿರ್ವಹಣೆಯನ್ನು ಖಚಿತಪಡಿಸಿ, ಸಹಾಯ ಧನದ ಅನುಕೂಲಗಳು ಉದ್ದೇಶಿತ ಫಲಾನುಭವಿಗಳಿಗೆ ತಲುಪುವಂತೆ ದಕ್ಷತೆಯಿಂದ ನಿರ್ವಹಿಸುವುದು ತ್ವರಿತವಾದ ಆರ್ಥಿಕ ಬೆಳವಣಿಗೆಯ ಗುರಿಗಳನ್ನು ಸಾಧಿಸುವಲ್ಲಿ ವಿತ್ತೀಯ ನೀತಿಯಲ್ಲಿ ಇರುವ ಮೂಲ ಅಂಶಗಳಲ್ಲಿ ಒಂದಾಗಿದೆ.

ರಾಜ್ಯ ಯೋಜನಾ ಆಯೋಗ

187(244) ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯೋಜನಾ ಆಯೋಗವನ್ನು ರಚಿಸಲಾಗಿದೆಯೇ;

ಆ) ರಚಿಸಿದಲ್ಲಿ ಆಯೋಗದ ಸದಸ್ಯರುಗಳು ಯಾರು;

ಇ) ಇಲ್ಲಿಯವರೆಗೆ ಈ ಆಯೋಗ ಎಷ್ಟು ಭಾರಿ ಸಭೆ ಸೇರಿದೆ ಹಾಗೂ ಇದಕ್ಕಾಗಿ ಖರ್ಚಾದ ಹಣ ಎಷ್ಟು;

ಈ) ಆಯೋಗವು ಇಲ್ಲಿಯವರೆಗೆ ಕೈಗೊಂಡ ಕಾರ್ಯಕ್ರಮಗಳ ವಿವರಗಳನ್ನು ನೀಡುವುದು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ರಾಜ್ಯ ಯೋಜನಾ ಮಂಡಳಿಯನ್ನು ರಚಿಸಲಾಗಿದೆ.

ಆ) ರಾಜ್ಯ ಯೋಜನಾ ಮಂಡಳಿಯನ್ನು ದಿನಾಂಕ 27–10–2003ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಹೆಚ್. ಹನುಮಂತಪ್ಪರವರ ಉಪಾಧ್ಯಕ್ಷತೆಯಲ್ಲಿ ಪುನರ್ ರಚಿಸಲಾಗಿರುತ್ತದೆ. ಶ್ರೀ ಹೆಚ್. ಹನುಮಂತಪ್ಪರವರು ರಾಜೀನಾಮೆ ನೀಡಿದ್ದರಿಂದ ಶ್ರೀ ಡಿ.ಎಂ. ಸಾಲಿಯವರನ್ನು ದಿನಾಂಕ 5–2–2004ರಿಂದ ಜಾರಿಗೆ ಬರುವಂತೆ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ರಾಜ್ಯ ಯೋಜನಾ ಮಂಡಳಿಯ ಸದಸ್ಯರ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಇ) ಇಲ್ಲಿಯವರೆಗೆ ಈ ಆಯೋಗವು ಒಟ್ಟು ಆರು ಸಭೆಗಳನ್ನು ನಡೆಸಿರುತ್ತದೆ. ಇದಕ್ಕಾಗಿ ಖರ್ಚಾದ ಹಣ ರೂ. 14,000/–

ಈ) ಅ) ರಾಜ್ಯ ಯೋಜನಾ ಮಂಡಳಿಯು ಜಿಲ್ಲಾ ಯೋಜನಾ ಸಮಿತಿಗಳನ್ನು ಬಲಪಡಿಸುವ ಉದ್ದೇಶದಿಂದ ಎಲ್ಲಾ ಜಿಲ್ಲೆಗಳ ಮುಖ್ಯ ಯೋಜನಾಧಿಕಾರಿಗಳ ಸಭೆಯನ್ನು ನಡೆಸಿತು.

ಆ) ದಾವಣಗೆರೆ, ಬಳ್ಳಾರಿ, ಹಾವೇರಿ ಮತ್ತು ಮೈಸೂರು ಜಿಲ್ಲೆಗಳಿಗೆ ಮಂಡಳಿಯ ಉಪಾಧ್ಯಕ್ಷರು ಸದಸ್ಯರೊಂದಿಗೆ ಭೇಟಿ ನೀಡಿ ಜಿಲ್ಲಾ ಯೋಜನಾ ಸಮಿತಿಗಳ ಸಭೆಗಳ ಕಲಾಪಗಳನ್ನು ವೀಕ್ಷಿಸಿ ಜಿಲ್ಲಾ ಯೋಜನಾ ಸಮಿತಿಗಳನ್ನು ಬಲಪಡಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದರು.

ಅನುಬಂಧ

ರಾಜ್ಯ ಯೋಜನಾ ಮಂಡಳಿಯ ಸದಸ್ಯರ ಹೆಸರುಗಳು

1.	ಮುಖ್ಯಮಂತ್ರಿಗಳು	–	ಅಧ್ಯಕ್ಷರು
2.	ಶ್ರೀ ಡಿ.ಎಂ. ಸಾಲಿ	–	ಉಪಾಧ್ಯಕ್ಷರು
3.	ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆಯ ಸಚಿವರು	–	ಸದಸ್ಯರು
4.	ಸರ್ಕಾರದ ಮುಖ್ಯ ಕಾರ್ಯದರ್ಶಿಗಳು	–	ಸದಸ್ಯರು
5.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು	–	ಸದಸ್ಯರು
6.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು	–	ಸದಸ್ಯರು
7.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ	–	ಸದಸ್ಯರು
8.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ	–	ಸದಸ್ಯರು
9.	ಶ್ರೀಮತಿ ವಿಜಯಲಕ್ಷ್ಮಿ ರಾಮಣ್ಣ	–	ಸದಸ್ಯರು
10.	ಶ್ರೀ ಬಿ. ಶಿವಪ್ಪ	–	ಸದಸ್ಯ ಕಾರ್ಯದರ್ಶಿ

ಕೆ.ಎಸ್.ಎಫ್.ಸಿ. ನಲ್ಲಿ ತನಿಖೆ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ

188(313) ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಎಸ್.ಎಫ್.ಸಿ. ಯಲ್ಲಿ ತನಿಖೆ ನಡೆಯುತ್ತಿರುವ ಅವ್ಯವಹಾರ ಪ್ರಕರಣಗಳು ಯಾವುವು; (ಪ್ರಕರಣಗಳ ಪೂರ್ಣ ವಿವರ ನೀಡುವುದು);

ಆ) ಈ ಪ್ರಕರಣಗಳು ಯಾವಾಗ ಬೆಳಕಿಗೆ ಬಂದಿರುವುದು (ಪ್ರಕರಣವಾರು ಮಾಹಿತಿ ನೀಡುವುದು);

ಇ) ತನಿಖೆಯನ್ನು ಯಾವ ಸಂಸ್ಥೆ ನಡೆಸುತ್ತಿದೆ;

ಈ) ಕೆ.ಎಸ್.ಎಫ್.ಸಿ. ಯನ್ನು ಕೇಂದ್ರೀಯ ಸಂಸ್ಥೆಗೆ ವಹಿಸುವ ಅಥವಾ ಕೇಂದ್ರೀಯ ಸಂಸ್ಥೆ ವಹಿಸಿಕೊಳ್ಳುವ ಪೂರ್ವಭಾವಿ ಸಿದ್ಧತೆಗಳು ನಡೆಯುತ್ತಿದೆಯೇ;